■ ಸಸಿತೋಟ

ಈಕೆ ಜಪಾನಿನ ಟಿವಿ ಆ್ಯಂಕರ್ ತೆತ್ಸುಕೊ ಎಂಬಾಕೆಯ ರೋಬೊ ಸಹೋದರಿ 'ಟೊಟ್ಟೊ'. ಅಂದರೆ ಆಕೆಯಂತೆ ಇರುವ ರೊಬಾಟ್ ತಯಾರಿಸಲಾಗಿದ್ದು, ಯಾರ ಜೊತೆ ಬೇಕಾದರೂ ಹರಟೆ ಕೊಚ್ಚುತ್ತಾಳಂತೆ. ಮಾತು ಹತ್ತಿರ ಹತ್ತಿರವಾದರೂ ಅಡ್ಡಿಯಿಲ್ಲ, ಮೀಟೂ ರಗಳೆಯಿಲ್ಲ ಎಂದು ಜಪಾನೀಯರು ಟೊಟ್ಟೋಗೆ ಫಿದಾ ಆಗಿದ್ದಾರಂತೆ.



ಸ್ವಿಝರ್ಲೆಂಡ್‌ನಲ್ಲಿರುವ ಈ ಕಪ್ಪೆ ವಸ್ತು ಸಂಗ್ರಹಾಲಯದಲ್ಲಿ ಇವು ಹೇಗೆ ಪಾರ್ಟಿ ಮಾಡುತ್ತಿವೆ ನೋಡಿ. 19ನೇ ಶತಮಾನದ ಜನಜೀವನ ತೋರಿಸಲು ಕಲಾವಿದ ಫ್ರಾಂಕೋಯಿಸ್ ಪೆರಿಯರ್ ಹುಲ್ಲು ತುಂಬಿದ ಈ ಕಪ್ಪೆಗಳನ್ನು ಬಳಸಿಕೊಂಡಿದ್ದಾನಂತೆ. ಸದ್ಯ 19ನೇ ಶತಮಾನದವರು ಯಾರೂ ಈಗ ಜೀವಿಸಿಲ್ಲ.



ವಯಸ್ಸು ಎಷ್ಟೆಂದರೂ ಒಂದು ಅಂಕೆ ಅಷ್ಟೆ. ಹಾಗೆಂದೇ 69ರ ವಯಸ್ಸಿನ ನೆದರ್ಲೆಂಡ್‌ನ ಸ್ವಯಂ ಘೋಷಿತ ಗುರು ಎಮಿಲ್ ಬ್ರ್ಯಾಂಡ್ ತನ್ನ ವಯಸ್ಸನ್ನು 49ಕ್ಕೆ ಇಳಿಸಿ ಎಂದು ಕೋರ್ಟ್ ಮೊರೆ ಹೋಗಿದ್ದಾನಂತೆ. ಪ್ರೀತಿ ಪ್ರೇಮಕ್ಕಾಗಿರುವ ವೆಬ್‌ಸೈಟ್‌ನಲ್ಲಿ ವಯಸ್ಸಿನ ಕುರಿತ ಅಸಮಾನತೆ ಹೋಗಲಾಡಿಸಲು ಈ ಬೇಡಿಕೆಯಂತೆ. ಕೋರ್ಟ್ ಸಮ್ಮತಿಸಿದರೆ ತಾನು ಮತ್ತೆ ಯೌವನ ಪಡೆದು ಯುವತಿಯರ ಜೊತೆ ಸಲುಗೆ ಬೆಳೆಸಬಹುದು ಎಂಬುದು ಆತನ ಹಂಚಿಕೆಯಂತೆ!

ಬಿಹಾರದಲ್ಲಿ ರಾಜಕೀಯ ಪ್ರವೇಶಕ್ಕಾಗಿ ಪರೀಕ್ಷೆ ಹಾಗೂ ಸಂದರ್ಶನ ನಡೆಸಲಾಗುತ್ತಿದೆಯಂತೆ. 2020 ರ ಬಿಹಾರ ವಿಧಾನಸಭಾ ಚುನಾವಣೆಗೆ ಪರೀಕ್ಷೆಯಲ್ಲಿ ಪಾಸ್ ಆದ ಅನೇಕ ಅಭ್ಯರ್ಥಿಗಳಿಗೆ ಮಾತ್ರ ಟಿಕೆಟ್ ಸಿಗಲಿದೆ ಎಂದು ಜೆಡಿಯು ಹೇಳಿದೆಯಂತೆ. ಎಷ್ಟೆಂದರೂ ಬಿಹಾರ ನಕಲಿಗೆ ಕುಖ್ಯಾತ. ಹೀಗಾಗಿ ಪ್ರಶ್ನೆ ಪತ್ರಿಕೆಯಲ್ಲಿ ಏನೇನು ಪ್ರಶ್ನೆಗಳಿರುತ್ತವೆಯೋ ಎಂಬ ಚಿಂತೆ ಬೇಡ.



ಮಾಲ್ಡೀವ್ಸ್‌ನ ಕಡಲಾಳದಲ್ಲಿರುವ ಈ ಐಷಾರಾಮಿ ವಿಲ್ಲಾದಲ್ಲಿ ಒಂದು ರಾತ್ರಿ ಕಳೆಯಬೇಕಾದರೆ 50 ಸಾವಿರ ಡಾಲರ್ (36 ಲಕ್ಷ ರೂಪಾಯಿ) ತೀಕಬೇಕಂತೆ. ಒಟ್ಟಿಗೆ 4 ದಿನಗಳಿಗೆ ಬುಕ್ ಮಾಡಿಸಬೇಕಂತೆ.



ಸ್ವೀಡನ್‌ನಲ್ಲಿ 'ಅಸಹ್ಯಕರ ಆಹಾರ'ದ ವಸ್ತು ಸಂಗ್ರಹಾಲಯವಿದ್ದು, ಈಕೆ ಇಲಿ ವೈನ್ ಅಂದರೆ ಅಕ್ಕಿಯ ವೈನ್‌ನಲ್ಲಿ ಮುಳುಗಿದ ಇಲಿಮರಿಗಳನ್ನು ವೀಕ್ಷಿಸುತ್ತಿದ್ದಾಳೆ. ಸ್ವೀಡನ್‌ಗೆ ಪ್ರವಾಸ ಹೋದರೆ ಅಲ್ಲಿಗೆ ಭೇಟಿ ನೀಡಲು ಮರೆಯಬೇಡಿ, ವಾಂತಿ ಮಾಡಲು ಚೀಲ, ಒರೆಸಿಕೊಳ್ಳಲು ಕರವಸ್ತ್ರ ಉಚಿತವಂತೆ.